ಬೆಂಗಳೂರು, ಕೋಲಾರ, ಹಾಸನ, ಚಿತ್ರದುರ್ಗ, ದಾವಣಗೆರೆ, ವಿಜಯನಗರ, ಬಳ್ಳಾರಿ, ರಾಯಚೂರು, ವಿಜಯಪುರ, ಕಲಬುರ್ಗಿ

ದಶಕದ ನಡಿಗೆ...

RNI No: KARKAN/2014/54928

ನೊಂದವರ ಧ್ವನಿ

# ಸಹಾಯ ವಾಣಿ

www.sahayavani.com

SAHAYAVANI

Postal Registration N.o KA/BGW--1862/2024-26

KANNADA DAILY PAPER

ಕನ್ನಡ ದಿನಪತ್ರಿಕೆ

ಸಂಪುಟ: 11 Vol:11
ಸಂಚಿಕೆ: 124 Issuse:124
ದಿನಾಂಕ:20–06–2024 Date:20-06-2024
ಗುರುವಾರ Thuesday
ಪುಟ:4 Page:4
ರೂ.: 3–00 Rs.3-00

ಸಂಪಾದಕರು: ಎಸ್.ಕೆ.ಒಡೆಯರ್ ಉಪಸಂಪಾದಕರು: ಸುಚಿತ್ರ ಎಸ್. ಒಡೆಯರ್ ಎಂಬಿಎ ಗೌರವ ಸಂಪಾದಕರು: ಗುರುರಾಜು ಎಂ., ಫೋ: 080–31212322 ಮೊ.: 9902543494 E-mail:sahayavany@gmail.com

# ಸತ್ಯ ಬಾಯಿಬಿಟ್ಟ ದರ್ಶನ್

## ನನ್ನ ಹೆಸರು ಹೇಳದಂತೆ ಶವ ವಿಲೇವಾರಿಗೆ 30 ಲಕ್ಷ ನೀಡಿದ್ದೆ: ನಟನ ಸ್ವಇಚ್ಛಾ ಹೇಳಿಕೆ

ಬೆಂಗಳೂರು:–

ರೇಣುಕಾಸ್ವಾಮಿ ಕ್ರೂರ ಕೊಲೆ ಪ್ರಕರಣದ ಎರಡನೇ ಆರೋಪಿ ನಟ ದರ್ಶನ್ ಪೊಲೀಸ್ ವಿಚಾರಣೆಯಲ್ಲಿ ಕೊಲೆ ಕೃತ್ಯದಲ್ಲಿ ತನ್ನ ಹೆಸರನ್ನು ಬಾಯ್ಬಿಡದಂತೆ ಮುಚ್ಚಿಹಾಕಲು 30 ಲಕ್ಷ ರೂಗಳನ್ನು ನೀಡಿರುವುದಾಗಿ ಪೊಲೀಸರ ಮುಂದೆ ಸ್ವ ಇಚ್ಛಾ ಹೇಳಿಕೆ ನೀಡಿದ್ದಾರೆ.

ಪೊಲೀಸ್ ವಿಚಾರಣೆಯಲ್ಲಿ ನಟ ದರ್ಶನ್ ಅಲಿಯಾಸ್ ಡಿ ಬಾಸ್ ಸ್ವ– ಇಚ್ಛೆಯ ಹೇಳಿಕೆ ದಾಖಲಿಸಿ ಕೊಲೆಯಾದ ವ್ಯಕ್ತಿಯ ಶವವನ್ನು ವಿಲೇವಾರಿ ಮಾಡಿ, ಪ್ರಕರಣದಲ್ಲಿ ತನ್ನ ಹೆಸರು ಎಲ್ಲಿಯೂ ಬರದಂತೆ ಮಾಡಬೇಕು ಎಂದು ಸೂಚಿಸಿ 30 ಲಕ್ಷ ರೂಗಳನ್ನು ನಾನು ನೀಡಿದ್ದೆ ಎಂದಿದ್ದಾರೆ.

ಪೊಲೀಸರು, ವಕೀಲರು ಮತ್ತು ಶವ ಸಾಗಿಸುವ ವ್ಯಕ್ತಿಗಳಿಗೆ ತಗಲುವ ವೆಚ್ಚವನ್ನು ಭರಿಸಲು ಪ್ರದೂಶ್‌ಗೆ 30 ಲಕ್ಷ ಹಣ



ನೀಡಿರುವುದಾಗಿ ದರ್ಶನ್ ಸ್ವ ಇಚ್ಛೆ ಹೇಳಿಕೆ ನೀಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆದರೆ ಪಟ್ಟಣಗೆರೆಯ ಶೆಡ್‌ನಲ್ಲಿ –3ನೇ ಪುಟಕ್ಕೆ

## ಪಾರಾಗಲು 50 ಲಕ್ಷ ಕೊಟ್ಟಿದ್ದ ದರ್ಶನ್

ರೇಣುಕಾಸ್ವಾಮಿ ಸ್ವಾಮಿಯನ್ನು ಚಿತ್ರದುರ್ಗ ಅಪಹರಿಸಿ ನಗರಕ್ಕೆ ಕ–ರೆತಂದು ಕೊಲೆಗೈದ ಪ್ರಕರಣದಿಂದ ಪಾರಾಗಲು ಎರಡನೇ ಆರೋಪಿ ನಟ ದರ್ಶನ್ 50 ಲಕ್ಷ ಹಣವನ್ನು ನೀಡಿದ್ದಾರೆ ಎಂದು ಪೊಲೀಸರು ಶಂಕಿಸಿದ್ದಾರೆ. ರೇಣುಕಾಸ್ವಾಮಿಯ ಕ್ರೂರ ಕೊಲೆಯಲ್ಲಿ ತಮ್ಮ ಹೆಸರು ಬಾರದಂತೆ ನೋಡಿಕೊಳ್ಳಲು ಆರೋಪಿ ಪ್ರದೂಶ್‌ಗೆ 30 ಲಕ್ಷ ಹಣ ನೀಡಿ ಶವ ವಿಲೇವಾರಿ ಮಾಡಿದ ನಾಲ್ವರಿಗೆ ತಲಾ 5 ಲಕ್ಷದಂತೆ ನಟ ದರ್ಶನ್ ಹಣ ನೀಡಿರುವುದು ತನಿಖೆಯಲ್ಲಿ ಕಂಡು ಬಂದಿದೆ. ಘೋರ ಅಪರಾಧದ ಸಂಚಿನ ಎಲ್ಲಾ ಅಂಶಗಳನ್ನು ನಿರ್ವಹಿಸಿ ತನ್ನನ್ನು ಪಾರು ಮಾಡಲು ಪ್ರದೋಶ್ ಗೆ 30 ಲಕ್ಷ ನಿಖಿಲ್ ಮತ್ತು ಕೇಶವಮೂರ್ತಿಗೆ ಕೊಲೆ ಮತ್ತು ಶವ ಎಸೆದ ಪಾತ್ರಕ್ಕಾಗಿ ತಲಾ 5 ಪುಟ 2 ಲಕ್ಷ ನೀಡಲಾಗಿದೆ. ದರ್ಶನ್, ಪವಿತ್ರಾ ಮತ್ತು ಇತರರ ಬದಲಿಗೆ ಸುಳ್ಳು ತಪ್ಪೊಪ್ಪಿಗೆಗಳನ್ನು ಸಲ್ಲಿಸಿ ಜೈಲಿಗೆ ಹೋಗಿದ್ದಕ್ಕಾಗಿ ರಾಘವೇಂದ್ರ ಮತ್ತು ಕಾರ್ತಿಕ್ ಎಂಬ ಇಬ್ಬರ ಕುಟುಂಬಗಳಿಗೆ ತಲಾ 5 ಲಕ್ಷ ಪಾವತಿಸಬೇಕು ಎನ್ನಲಾಗಿದೆ.

## ಪತಿ ಭೇಟಿಯಾದ ಪತ್ನಿ ವಿಜಯಲಕ್ಷ್ಮಿ

ಬೆಂಗಳೂರು:–



ಚಿತ್ರದುರ್ಗದ ರೇಣುಕಾ ಸ್ವಾಮಿ ಕ್ರೂರ ಕೊಲೆ ಪ್ರಕರ ಣದಲ್ಲಿ ಬಂಧಿತನಾಗಿ ಅನ್ನಪೂರ್ಣೇಶ್ವರಿನಗರ ಪೊಲೀಸ್ ಠಾಣೆ–ಯ ಕಸ್ಟಡಿಯಲ್ಲಿರುವ ನಟ ದರ್ಶನ್ ರನ್ನು ನೋಡಲು ಇದೇ ಮೊದಲ ಬಾರಿಗೆ ಪತ್ನಿ ವಿಜಯಲಕ್ಷ್ಮಿ ಪೊಲೀಸ್ ಠಾಣೆಗೆ ಆಗಮಿಸಿ ಭೇಟಿ ನೀಡಿದರು. ಪತಿ ದರ್ಶನ್ ಬಂಧನದ ಬಳಿಕ ಯಾವುದೇ ಪ್ರತಿಕ್ರಿಯೆ ನೀಡಿದ –3ನೇ ಪುಟಕ್ಕೆ

## ಹಲವೆಡೆ ಮಹಜರು ಪ್ರಮುಖ ಸಾಕ್ಷಿಗಳು ಜಪ್ತಿ



### ರೇಣುಕಾಸ್ವಾಮಿ ಹತ್ಯೆ

ಬೆಂಗಳೂರು:–

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಪವಿತ್ರಾ ಗೌಡ ಸೇರಿ ಬಂಧಿತ ಆರೋಪಿಗಳನ್ನು ಕರೆದೊಯ್ದು ಅಪರಾಧ ನಡೆದ ಸ್ಥಳ ಹಾಗೂ ಇತರೆ ಸ್ಥಳಗಳಲ್ಲಿ ಪೊಲೀಸರು ಮಹಜರು ನಡೆಸಿದ್ದಾರೆ.

ಇನ್ನೂ ಕೆಲವು ಸ್ಥಳಗಳ ಮಹಜರು ಬಾಕಿ ಇದೆ ಎನ್ನಲಾಗಿದ್ದು, ಮಹಜರು ವೇಳೆ ನಟ ದರ್ಶನ್ ನಿಂದ ಪ್ರದೋಶ್ ಪಡೆದ 30 ಲಕ್ಷ ಹಣ ಗಿರಿನಗರದ ನಿವಾಸದಲ್ಲಿ

### ಪತ್ನಿ ವಿಜಯಲಕ್ಷ್ಮೀ ಮನೆಯಲ್ಲಿ ಶೂ ಪತ್ತೆ

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆಯಾದ ದಿನ ನಟ ದರ್ಶನ್ ಧರಿಸಿದ್ದ ಶೂ ದರ್ಶನ್ ಅವರ ಪತ್ನಿ ವಿಜಯಲಕ್ಷ್ಮೀ ಮನೆಯಲ್ಲಿ ಪತ್ತೆಯಾಗಿದೆ. ವಿಚಾರಣೆ ವೇಳೆ ಆರೋಪಿಗಳು ನೀಡಿದ ಮಾಹಿತಿ ಮೇರೆಗೆ ಪೊಲೀಸರು ಹೊಸಕೆರೆಹಳ್ಳಿಯಲ್ಲಿರುವ ವಿಜಯಲಕ್ಷ್ಮೀ ಅವರ ಮನೆಯಲ್ಲಿ ದರ್ಶನ್ ಶೂಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ. ಪಟ್ಟಣಗೆರೆಯ ಶೆಡ್‌ನಲ್ಲಿ ರೇಣುಕಾಸ್ವಾಮಿ ಮೇಲೆ ನಟ ದರ್ಶನ್ ಸೇರಿದಂತೆ ಇತರೆ ಆರೋಪಿಗಳು ಮಾರಣಾಂತಿಕ ಹಲ್ಲೆ ನಡೆಸಿ ಕೊಲೆಗೈದಿದ್ದರು. ಬಳಿಕ ದರ್ಶನ್ ಶೆಡ್‌ನಿಂದ ನೇರವಾಗಿ ರಾಜರಾಜೇಶ್ವರಿನಗರದಲ್ಲಿರುವ ತನ್ನ ಮನೆಗೆ ತೆರಳಿ ಬಟ್ಟೆ ಹಾಗೂ ಶೂಗಳನ್ನು ಬದಲಿಸಿ ಸ್ನಾನ ಮಾಡಿಕೊಂಡು ಮೈಸೂರಿಗೆ ತೆರಳಿದ್ದರು ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ.

ಪತ್ತೆಯಾಗಿದ್ದು, ಅದನ್ನು ಜಪ್ತಿ ಮಾಡಿ –3ನೇ ಪುಟಕ್ಕೆ

## ಚನ್ನಪಟ್ಟಣ ಕಣಕ್ಕಿಳಿಯದೆ ವಿಧಿಯಿಲ್ಲ: ಡಿಕೆಶಿ

ಬೆಂಗಳೂರು:–



ಚನ್ನಪಟ್ಟಣ ವಿಧಾನಸಭಾ ಉಪಚುನಾವಣೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೇ ಕಣಕ್ಕಿಳಿಯುತ್ತಾರೆ ಎಂಬ ಸುದ್ದಿಗಳು ಹರಿದಾಡುತ್ತಿರುವಾಗಲೇ ಪಕ್ಷ ಹಾಗೂ ಮತದಾರರು ಬಯಸಿದರೆ ಉಪಚುನಾವಣೆಯಲ್ಲಿ ಕಣಕ್ಕಿಳಿಯತ್ತೇನೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಿಂದ ಯಾರನ್ನು ಅಭ್ಯ ರ್ಥಿಯನ್ನಾಗಿಸಬೇಕು ಎಂಬ ಬಗ್ಗೆ ಇನ್ನೂ ತೀರ್ಮಾನ ಮಾಡಿಲ್ಲ. ಪಕ್ಷ ಹಾಗೂ ಮತದಾರರು ತಮ್ಮ ಸ್ಪರ್ಧೆ ಬಯಸಿದರೆ ವಿಧಿಯೇ ಇಲ್ಲ ಎಂದು ಅವರು ಹೇಳಿದರು

ಬೆಂಗಳೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚನ್ನಪಟ್ಟಣ ನನ್ನ ಹೃದಯವಿದ್ದಂತೆ. ಚನ್ನಪಟ್ಟಣ ನನಗೆ ರಾಜಕೀಯ ಜನ್ಮ ನೀಡಿದ ತಾಲ್ಲೂಕು. ಚನ್ನಪಟ್ಟಣದ ಸಾತನೂರಿನಿಂದ ನಾಲ್ಕು ಬಾರಿ ಗೆದ್ದಿದ್ದೇನೆ. ಚನ್ನಪಟ್ಟಣದ ಮತದಾರರು ನನ್ನ ಮೇಲೆ ಪ್ರೀತಿ, ವಿಶ್ವಾಸ, ನಂಬಿಕೆ ಇಟ್ಟಿದ್ದಾರೆ. ಮತದಾರರು, ಪಕ್ಷ ಬಯಸಿದರೆ ನಾನೇ ಉಪಚುನಾವಣೆಯಲ್ಲಿ ಕಣಕ್ಕಿಳಿಯುವ ದಾರಿ ಬಿಟ್ಟು ಬೇರೆ ವಿಧಿಯೇ ಇಲ್ಲ ಎಂದರು. ಕನಕಪುರದಂತೆ ಚನ್ನಪಟ್ಟಣವನ್ನು ಅಭಿವೃದ್ಧಿ ಮಾಡಬೇಕು. ಜನ ಲೋಕಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ 80 ಸಾವಿರಕ್ಕೂ ಹೆಚ್ಚು ಮತ ಕೊಟ್ಟಿದ್ದಾರೆ. ಇಲ್ಲಿನ ಜನ ಒಳ್ಳೆಯವರು. ನನ್ನ ಮೇಲೆ ಪ್ರೀತಿ ಹೊಂದಿದ್ದಾರೆ. ಇಲ್ಲಿ ಬದಲಾವಣೆ ಬೇಕಾಗಿದೆ. –3ನೇ ಪುಟಕ್ಕೆ

## ಎಸ್‌ಪಿಪಿ ಬದಲಾವಣೆಗೆ ಒತ್ತಡವಿಲ್ಲ



ಬೆಂಗಳೂರು:–

ರೇಣುಕಾಸ್ವಾಮಿ ಕೊಲೆ ಪ್ರಕರಣದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಬದಲಾವಣೆ ಮಾಡುವಂತೆ ಯಾರೂ ಒತ್ತಡ ಹೇರಿಲ್ಲ. ಬದಲಾವಣೆ ಮಾಡುವ ವಿಚಾರ ನನಗೆ ಗೊತ್ತಿಲ್ಲ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಹೇಳಿದರು. ಬೆಂಗಳೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಬದಲಾವಣೆ ಮಾಡುವ ವಿಚಾರ ಗೊತ್ತಿಲ್ಲ. ಬದಲಾವಣೆ ಮಾಡುವುದಾದರೆ ಸರ್ಕಾರ ಅಡ್ವೊ–ಕೇಟ್ ಜನರಲ್ ಮತ್ತು ಕಾನೂನು ತಜ್ಞರ ಸಲಹೆ ಪಡೆದು ಮುಂದುವರೆಯುತ್ತದೆ ಎಂದು ಸ್ಪಷ್ಟಪಡಿಸಿದರು. ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಬದಲಾವಣೆಗೆ ಕೆಲವರು ಒತ್ತಡ ಹೇರಿದ್ದಾರೆ ಎಂಬುದು ಸರಿಯಲ್ಲ. ಯಾರೇ ಅಗತ್ಯವಿದ್ದರೆ ಎಸ್‌ಪಿಪಿ ಬದಲಾವಣೆ ಮಾಡಿದರೆ ಅದರಲ್ಲಿ ತಪ್ಪೇನಿಲ್ಲ. ಏನಾದರೂ ಕಾರಣ ಇದ್ದಾಗ ಈ ರೀತಿ ತೀರ್ಮಾನ ತೆ–ಗೆದು ಕೊಳ್ಳಲಾಗುತ್ತದೆ. ಹಾಗೆಂದು ಈ ಪ್ರಕರಣವನ್ನು ಸಡಿಲ ಮಾಡುವ ಉದ್ದೇಶ ಇಲ್ಲ ಎಂದು ಸ್ಪಷ್ಟಪಡಿಸಿದ ಅವರು, ಯಾವ ಮುಲಾಜು, ಒತ್ತಡಕ್ಕೂ ಒಳಗಾಗದೆ ಪ್ರಕರಣ ತನಿಖೆ ನಡೆದಿದೆ ಎಂದು ಹೇಳಿದರು.

## ಗುಂಡಿನ ದಾಳಿ ವ್ಯಕ್ತಿ ಸಾವು



ನವದೆಹಲಿ:–

ದೆಹಲಿಯ ಬರ್ಗರ್‌ಕಿಂಗ್ ಅಂಗಡಿಯಲ್ಲಿ ಅಪರಿಚಿತರು ನಿನ್ನೆ ತಡರಾತ್ರಿ ಗುಂಡಿನ ದಾಳಿ ನಡೆಸಿದ್ದು, ವ್ಯಕ್ತಿಯೊಬ್ಬ ಮೃತಪಟ್ಟಿದ್ದಾನೆ. ದೆಹಲಿಯ ರಜೌರಿ ಗಾರ್ಡನ್‌ನಲ್ಲಿರುವ ಬರ್ಗರ್‌ಕಿಂಗ್ ಮಳಿಗೆಯಲ್ಲಿ ನಿನ್ನೆ ತಡರಾತ್ರಿ ಮೂವರು ಅಪರಿಚಿತ ದುಷ್ಕರ್ಮಿಗಳು ತಮ್ಮ –3ನೇ ಪುಟಕ್ಕೆ

## ಅವಧಿ ಮೀರಿದ ಆಹಾರ ಮಾರಾಟ ವಿರುದ್ಧ ಕ್ರಮ

ಬೆಂಗಳೂರು.ಜೂ.19–



ಬಸ್ ನಿಲ್ದಾಣದ ಮಳಿಗೆಗಳಲ್ಲಿ ಅವಧಿ ಮೀರಿದ ಆಹಾರ ಮಾರಾಟ ಮಾಡಿದರೆ ಅಂತವರ ವಿರುದ್ಧ ಕ್ರಮಕೈಗೊಳ್ಳುವ ಎಚ್ಚರಿಕೆಯನ್ನು ಮುಖ್ಯಮಂತ್ರಿ ಕಚೇರಿ ನೀಡಿದೆ.

ಬಸ್ ನಿಲ್ದಾಣಗಳ ವ್ಯಾಪಾರ ಮಳಿಗೆಗಳಲ್ಲಿ ಅವಧಿ ಮೀರಿದ ಆಹಾರಗಳನ್ನು ಮಾರಾಟ ಮಾಡಲಾಗುತ್ತಿದೆ. ಜತೆಗೆ ನೈರ್ಮಲ್ಯ ಕಾಪಾಡುತ್ತಿಲ್ಲ ಎಂಬ ದೂರುಗಳ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಕಚೇರಿ ಮಳಿಗೆಗಳ –3ನೇ ಪುಟಕ್ಕೆ

# ಪ್ರವಾಸಿಗರನ್ನು ಕೈ ಬೀಸಿ ಕರೆಯುತ್ತಿರುವ ಮಿನಿ ನಯಾಗರ ಜಲಪಾತ


ಆನಂದ ಸ್ವಾಮಿ ಹಿರೇಮಠ
ರಾಯಚೂರು,ಜೂ.19



ಜಲಪಾತವನ್ನು ರಾಜಲಬಂಡ 3 ಗ್ರಾಮದಲ್ಲಿ ನೋಡಬಹುದಾಗಿದೆ ತುಂಗಭದ್ರ ನದಿಗೆ ರಾಜಲಬಂಡಾ ತಿರುವು ಯೋಜನೆ ಅಡಿಯಲ್ಲಿ ಆರ್.ಡಿ. ಎಸ್. ಅಣೆಕಟೆಯನ್ನು ಕಟ್ಟಲಾಗಿದ್ದು ಅಂದಾಜು 31 ಅಡಿ ಎತ್ತರ 2690 ಮೀ ಉದ್ದದ ಅಂ–ದಾಜು ತಡೆಗೋಡೆಯ ಮೇಲಿಂದ ನದಿಯ ನೀರು ತುಂಬಿ ಧುಮ್ಮಿಕ್ಕುವ ಆ ದೃಶ್ಯವನ್ನು ವರ್ಣಿಸುವುದಕ್ಕೂ ಕೂಡ 2 ಸಾಧ್ಯವಾಗುವುದಿಲ್ಲ ಕಣ್ಣುಹಾಯಿಸಿದಷ್ಟು ದೂರಕ್ಕೂ ನೀರು ಧುಮ್ಮಿಕ್ಕುತ್ತಿರುವ ನೋಟವೇ ಕಾಣುತ್ತದೆ ಹತ್ತಿರ ಹೋದರೆ ಗಾಳಿಯ ಜೋತೆ ನೀರ ಹನಿಗಳು ಕೂಡಿ ಮೈಯನ್ನು ಸ್ಪರ್ಷಿಸಿದಾಗ ತಣ್ಣನೆಯ ಅನುಭವ ಕಚ್ಚಗುಳಿ * ಮೈಮನಕ್ಕೆ ಇಟ್ಟಂತಾಗುತ್ತದೆ. ತುಂಗಭದ್ರ ಜಲಾಶಯ ವ್ಯಾಪ್ತಿಯಲ್ಲಿ ಉತ್ತಮವಾಗಿ ಮಳೆಯಾಗುತ್ತಿರುವುದರಿಂದ ತುಂಗಭದ ನದಿ ತುಂಬಿ ಹರಿಯುತ್ತಿದೆ. ನದಿಯ ನೀರು ತಡೆಗೊಡೆಯ ಮೇಲಿಂದ ಧುಮ್ಮಿಕ್ಕುತ್ತ ರಭಸವಾಗಿ * ಜಲಪಾತದಂತೆ ಹರಿಯುತ್ತಿರುವುದನ್ನು ಕಾಣಬಹುದು. ಕಣ್ಣುಹಾಯಿಸಿದಷ್ಟು ನೀರು ಹಾಲಿನ ನೋರೆಯಂತೆ ಹ ರಿಯುವ ಮನಮೋಹಕ ನೋಟವನ್ನು ಈ ಸವಿಯುವುದಕ್ಕೆ ಪ್ರತಿ ದಿನ ಸಾವಿರಾರು ಪ್ರವಾಸಿಗರು ಬರುತ್ತಾರೆ. ನದಿಯ ನೀರಿನ ಜೊತೆ–ಗೆ ಮೀನುಗಳು ಕೂಡ ಅಣೆಕಟ್ಟೆಯ ಮೇಲಿಂದ ಹಾರಿ ಬರುವುದು ಖುಷಿ ನೀಡುತ್ತದೆ. ಮೀನುಗಳನ್ನು ಮುಖ್ಯ ಅಹಾರವಾಗಿಸಿಕೊಂಡಿರುವ ಅನೇಕ ಕೋಕ್ಕರೆ ಜಾತಿಯ ಪಕ್ಷಿಗಳು ಗುಂಪು ಗುಂಪಾಗಿ ಸೇರಿ ನದಿಯಲ್ಲಿ ಹ– ರಿದು ಬರುವ ಮೀನುಗಳಿಗಾಗಿ ಕಾಯುತ್ತ ನಿಂತಿರುವ ಕೊಕ್ಕರೆಗಳು ತಮ್ಮ ಕೊಕ್ಕಿನಿಂದ ಹಿಡಿದು ತಿನ್ನುವುದನ್ನು ನೋಡುವುದೆ ಚೆ–ಂದ, ಅಳಿವಿನಂಚಿನಲ್ಲಿರುವ ನೀರು ನಾಯಿಗಳು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ನದಿ ನೀರಿನಲ್ಲಿ ಮೀನುಗಳನ್ನು ಹಿಡಿದು ತಿನ್ನುತ್ತಿರುವುದನ್ನು ನೋಡುವುದಕ್ಕೆ ಸಿಗುತ್ತವೆ.

### ಪ್ರಯಾಣಿಕರಿಗೆ ಬಸ್‌ಗಳ ಸೌಲಭ್ಯವಿದೆ

ಮಾನ್ವಿ ಪಟ್ಟಣದಿಂದ 30 ಕಿ.ಮೀ.ದೂರ ಇರುವ ರಾಜಲಬಂಡ ಗ್ರಾಮಕ್ಕೆ ಸರಕಾರಿ ಬಸ್ ಗಳ ಸೌಲಭ್ಯವಿದೆ. ಗ್ರಾಮದಲ್ಲಿ ಪ್ರಯಾಣಿಕರಿಗೆ ಅಗತ್ಯವಿರುವ ಉಪಾಹಾರ ಮಂದಿರಗಳ ವ್ಯವಸ್ಥೆ ಇದೆ. ಗ್ರಾಮದಿಂದ ಅಣೇಕಟ್ಟೆಯವರೆಗೆ ಒಂದು ಕಿ.ಮೀ ದೂರ ಇದ್ದು ಕಾಲ್ನಡಿಗೆ ಮೂಲಕವು ಸಾಗಬಹುದು ವಾಹನ ಸಂಚಾರಕ್ಕೆ ಉತ್ತಮ ರಸ್ತೆ ಸೌಲಭ್ಯವಿದೆ ವಾಸ್ತವ್ಯ ಮಾಡವವರಿಗೆ ಪ್ರವಾಸಿ ಮಂದಿರ ಕೂಡ ಲಭ್ಯವಿದೆ. ಮೀನು ಪ್ರಿಯ– ರಿಗೆ ಸ್ಥಳಿಯರು ಬೇಡಿಕೆ ಮೇರೆಗೆ ವಿವಿಧ ಮೀನಿನ ಭಕ್ಷಗಳನ್ನು ಕೂಡ ತಯಾರಿಸಿ ಕೋಡುತ್ತಾರೆ. ವಾರಂಚಿನಲ್ಲಿ ಜೂನ್ ತಿಂಗಳಿಂದ ನದಿಯಲ್ಲಿ ನೀರು ಲಭ್ಯವಿರುವವರೆಗೂ ನೋಡಬಹುದಾದ ಸುಂದರವಾದ ಪ್ರೇಕ್ಷಣಿಯ ಸ್ಥಳಗಳಲ್ಲಿ ಒಂದಾಗಿದೆ.



ಗ್ರಾಮದ ಮಕ್ಕಳು ನದಿಯ ಇಳಿಜಾರಿನಲ್ಲಿ ಮಲಗಿ ನದಿಯ ನೀರಿನಲ್ಲಿ ಹರಿದು ಬರುವ ಮೀನುಗಳನ್ನು ಹಿಡಿದು ದಂಡೆಯ ಮೇಲೆ ಇರುವ ಗೇಳೆಯ ನೀಗೆ ಎಸೆದರೆ ಅವನು ಮೀನುಗಳನ್ನು ನೀರಿನ ಡಬ್ಬದಲ್ಲಿ ಸಂಗ್ರಹಿಸುತ್ತಾನೆ ನಂತರ ಎಲ್ಲಾರು ಕೂಡಿ ನದಿಯ ದಡದಲ್ಲಿ ಸಿಗುವ ಕಟ್ಟಿಗೆಯಲ್ಲಿ ಮೀನುಗಳನ್ನು ಸುಟ್ಟು ಕಾರ. ಉಪ್ಪು ಹಾಕಿಕೊಂಡು ತಿನ್ನುತ್ತಾರೆ. ಉಳಿದವುಗಳನ್ನು ಮಾರಾಟ ಮಾಡಿ ಹಣಗಳಿಸಿ ಖುಷಿ ಪಡುತ್ತಾರೆ .

ನದಿಯಲ್ಲಿ ದೊರೆಯುವ ಜಿಲೇಬಿ, ವಲಗ, ಬಂಗಾರಿ. ಮುಸ್ಕ, ಪೆಂಡೆ, ರಬ್ಬರಿನಂತೆ ಇರುವ ತೋಗಲು ಮೀನುಗಳನ್ನು ಮೀನುಗಾರರು ಬಲೆ ಹಾಕಿ ಹಿಡಿದು ಮಾರಾಟ ಮಾಡುತ್ತಾರೆ. ಜೂನ್ ತಿಂಗಳಲ್ಲಿ ತುಂಗಭದ್ರ ನದಿ ತುಂಬಿ ಹರಿಯುವ ಸಮಯದಲ್ಲಿ ಈ ಭಾಗದ ಮೂಲಕ ಮಂತ್ರಾಲಯಕ್ಕೆ ತೆರಳುವ ಯಾತ್ರಿಕರು ಮಾನ್ವಿಯಲ್ಲಿನ ದಾಸ ಶ್ರೇಷ್ಠರಾದ ಶ್ರೀಜಗನ್ನಾಥ ದಾಸರ ಸನ್ನಿಧಾನವನ್ನು ದರ್ಶಿಸಿಕೊಂಡು ಪಟ್ಟಣದಿಂದ ಚೀಕಲಪರ್ವಿ ರಸ್ತೆಯಲ್ಲಿ ಬರುವ ವ್ಯಾಸರಾಜರು ಪ್ರತಿಷ್ಠಾಪಿಸಿದ ಹಾಗೂ ಶ್ರೀ ರಾಘವೇಂದ್ರ ಸ್ವಾಮಿಗಳು ಚತುರ್ ಮಾಸ ವೃತ್ತವನ್ನು ಕೈಗೊಂಡ ಶ್ರೀ ಸಂಜೀವರಾಯ ದೇವಸ್ಥಾನದಲ್ಲಿ ಸಂಜೀವರಾಯನ ದರ್ಶನ ಮಾಡಿಕೊಂಡು ಚೀಕಲಪರ್ವಿ ಗ್ರಾಮದಲ್ಲಿನ ಶ್ರೀ ವಿಜಯದಾಸರ ಮೂಲ ಮನೆ ಹಾಗೂ ವಿಜಯದಾಸರ ಕಟ್ಟೆಯನ್ನು ದರ್ಶಿಸಿಕೊಂಡು ರಾಯಚೂರು ರಸ್ತೆಯಲ್ಲಿ ಬರುವ ಕಲ್ಲೂರು ಮಹಾಲಕ್ಷ್ಮೀ ದೇವಸ್ಥಾನ ಹಾಗೂ ಕಪಗಲ್ ವೃತ್ತದ ಮೂಲಕ ಗೋರ್ಕಲ್ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿಯ ದೇವಸ್ಥಾನ, ಹಾಗೂ ರಾಜಲಬಂಡ ಗ್ರಾಮದಲ್ಲಿನ ಅಣೆಕಟ್ಟೆಯನ್ನು ನೋಡಿಕೊಂಡು ಮಂತ್ರಾಲಯ ರಾಘವೇಂದ್ರ ಸ್ವಾಮಿಗಳ ಮಠಕ್ಕೆ ಹೋಗುತ್ತಾರೆ.

